ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 2, Sep-Oct 2019, 90-95
©*IIMRD*, Mysuru

IIMRD JOURNALS
www.iimrd.com

# ವಿಮರ್ಶಕ ಮತ್ತು ವಿಮರ್ಶೆಯ ಸ್ವರೂಪ : ಒಂದು ವಿಶ್ಲೇಷಣೆ

ಡಾ.ಯಲ್ಲಮ್ಮ.ಕೆ*

## ಪೀಠಿಕೆ

ಪ್ರಾಚೀನತಮ ಕನ್ನಡ ಭಾಷೆಯ ಹುಟ್ಟು ಮತ್ತು ಬೆಳವಣಿಗೆಯ ಚರಿತ್ರೆಯನ್ನು ಗಮನಿಸುವುದಾದರೆ, ಯುಗ–ಯುಗಾಂತರಗಳಾಚೆಗಿನ ಕಾಲಘಟ್ಟಗಳಲ್ಲಿಯೂ ಕನ್ನಡ ಸಾಹಿತ್ಯ ವಿಫುಲವಾಗಿ ಬೆಳೆದಿತ್ತು ಎಂಬುವುದಕ್ಕೆ ಮೂಲಾಧಾರಗಳು ಸಾಕ್ಷ್ಯವನ್ನೊದಗಿಸುತ್ತವೆ. ತ್ರೇತಾಯುಗದಲ್ಲಿ ವಾಲ್ಮೀಕಿ ಮಹರ್ಷಿಗಳು ರಾಮಾಯಣವನ್ನು ಬರೆದರೆ, ದ್ವಾಪರದಲ್ಲಿ ವೇದವ್ಯಾಸ ಮಹರ್ಷಿಗಳು ಮಹಾಭಾರತವನ್ನು ರಚಿಸಿರುವುದು, ಪ್ರಥಮತಃ ಉಪಲಬ್ಧವಾದ ಹಲ್ಮಿಡಿ ಶಾಸನವು ಕನ್ನಡ ಭಾಷೆಯ ಅಸ್ಮಿತೆಗೆ ಆಧಾರವಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಸಾಹಿತ್ಯ ಚರಿತ್ರೆಯನ್ನು ಮತ–ಧರ್ಮ, ಕಾಲ, ವ್ಯಕ್ತಿಗಳ ಆಧಾರಗಳ ಮೇಲೆ ಭಾಷಾ ಬೆಳವಣಿಗೆಯ ಅವಧಿಯನ್ನು *ಆರ್.ನರಸಿಂಹಾಚಾರ್ಯರು ಜೈನ, ವೀರಶೈವ, ಬ್ರಾಹ್ಮಣಯುಗ ಎಂದೂ, ಬಿ.ಎಂ.ಶ್ರೀ ರವರು ಆರಂಭ ಕಾಲ, ಮತ್ತು ಪ್ರಚಾರಯುಗ, ಸಾರ್ವಜನಿಕ ಯುಗ, ಆಧುನಿಕ ಯುಗ ಎಂದೂ, ರಂ.ಶ್ರೀ.ಮುಗಳಿ ರವರು ಪಂಪಪೂರ್ವ, ಪಂಪ, ಬಸವ, ಕುಮಾರವ್ಯಾಸ ಯುಗಗಳೆಂದು ವಿವಿಧ ರೀತಿಯ ಕಾಲಘಟ್ಟಗಳನ್ನಾಗಿ ಗುರುತಿಸುತ್ತ ಬಂದಿದೆ.*[1] ಸಂಸ್ಕೃತ ಭಾಷೆಯಲ್ಲಿ ಪೂರ್ವ ಕವಿಗಳ, ಕಾವ್ಯ–ಕೃತಿಗಳಿಗೆ ನಂತರದ ಕವಿಗಳು, ಕಾವ್ಯ ಮೀಮಾಂಸಕರುಗಳು ಟೀಕೆ–ಟಿಪ್ಪಣಿ, ಭಾಷ್ಯಗಳನ್ನು ಬರೆಯುವುದರ ಮೂಲಕ ಆ ಕೃತಿಗಳಿಗೆ ಮತ್ತಷ್ಟು ಪ್ರಚುರತೆಯನ್ನು, ಘನತೆ–ಗೌರವ ತಂದುಕೊಟ್ಟಿರುವುದನ್ನು ಮರೆಯುವಂತಿಲ್ಲ. ಆದಿ ಕಾಲದಿಂದಲೂ ಈ ವಿಮರ್ಶೆ ಎಂಬುದು ಬೆಳೆದು ಬಂದಿದೆ. ಅಂತೆಯೇ ಬೇಂದ್ರೆಯವರು[2] 'ಕವಿ ಮತ್ತು ವಾಚಕ/ಓದುಗನ ನಡುವೆ ವಿಮರ್ಶಕ ಸೇತುವೆಯಿದ್ದಂತೆ' ಎಂದು *'ಕವಿ ಆ ದಡದಲ್ಲಿ – ವಾಚಕ ಈ ದಡದಲ್ಲಿ'* ಎಂದು ಕವಿತೆಯನ್ನು ಬರೆದಿದ್ದಾರೆ. ಓದುಗನನ್ನು ತಲುಪದ ಕೃತಿಯ ಸಾರ್ಥಕ್ಯವೇನು..? ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. 'ಸಹೃದಯಿತನದಿಂದ ಕವಿ–ಕಾವ್ಯ–ಕೃತಿ ಹುಟ್ಟುವಂತೆ; ವಿಮರ್ಶಕನಲ್ಲಿ ಕವಿಭಾವ, ಸಹೃದಯಿತನ ಸಮ್ಮಿಳಿತವಾಗಿರಬೇಕು, ಆಗ ಮಾತ್ರ ಉತ್ತಮ ವಿಮರ್ಶೆ ಹುಟ್ಟುತ್ತದೆ.

---

* ***ಮುಖ್ಯಸ್ಥರು ಮತ್ತು ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು ತಾವರಗೇರಾ, ಕುಷ್ಟಗಿ ತಾಲೂಕು, ಕೊಪ್ಪಳ ಜಿಲ್ಲೆ.***

[1] ಉಲ್ಲೇಖ: ಶಾಮರಾಯ ತ. ಸು (2010). ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. ಪು.ಸಂ : 4 ಮತ್ತು 5.
[2] ಉಲ್ಲೇಖ: ಎಸ್.ಆಮೂರ (2012) ಕನ್ನಡ ಸಾಹಿತ್ಯ ಮೀಮಾಂಸೆ. ಸಂ: ರಹಮತ್ ತರೀಕೆರಿ, ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ. ಪು.ಸಂ. 285.

'ವಿಮರ್ಶೆ' ಎಂಬ ಪದವು 'ವಿ+ಮೃಶ' ನಿಂದ ನಿಷ್ಪನ್ನಗೊಂಡಿದೆ. ವಿಶೇಷವಾಗಿ ಒರೆಗೆ ಹಚ್ಚುವುದು, ಉಜ್ಜಿ ನೋಡುವುದು ಎಂದು ಅದರ ಅರ್ಥ. 'ಒಂದು ಸಾಹಿತ್ಯ ಕೃತಿಯನ್ನು ಕುರಿತು ವಿಶೇಷವಾದ ಚರ್ಚೆಯನ್ನು ನಡೆಸುವುದು. ಸಾಹಿತ್ಯ ವಿಮರ್ಶೆ ಇಂಗ್ಲಿಷ್ ನ 'Critic'ಎಂಬ ಶಬ್ದವು 'Kritikos' ಅಥವ 'Criticism' ಕ್ರಿಟಿಸಿಸಂ ಗ್ರೀಕ್ ಭಾಷೆಯ ಕ್ರಿಟಿಕೋಸ್ 'ನ್ಯಾಯಾಧೀಶ' ಎಂಬ 'To Judge' ಪದದಿಂದ ಇಂಗ್ಲಿಷ್‌ಗೆ ಬಂದದ್ದಾಗಿದೆ.[3] 'ಸಾಹಿತ್ಯ ಕೃತಿಗಳನ್ನು ಸ್ಪಷ್ಟಗೊಳಿಸುವ, ಲಕ್ಷಣಗಳನ್ನು ತಿಳಿಸುವ, ವಿಂಗಡಿಸುವ, ಹೋಲಿಸುವ, ವಿಶ್ಲೇಷಿಸುವ, ವಿವರಿಸುವ, ಮೌಲ್ಯಮಾಪನ ಮಾಡುವ ಬಗ್ಗೆ ನಡೆಸುವ ಪ್ರಯತ್ನಗಳು ವಿಮರ್ಶೆ ಎನಿಸಿಕೊಳ್ಳುತ್ತವೆ. ವಿಮರ್ಶೆ ಎಂಬ ಪದದ ವ್ಯಾಪ್ತಿಯು ದಿಗಿಲು ಮುಟ್ಟಿಸುವಷ್ಟು, ಗೊಂದಲ ಹುಟ್ಟಿಸುವಷ್ಟು ವಿಶಾಲವಾಗಿ ಬೆಳೆದುಬಿಟ್ಟಿದೆ. 'ವಿಮರ್ಶೆ ಕಾಯಿದೆ, ಕಾನೂನಿನ ಆಧಾರದ ಮೇಲೆ ಕೊಡುವ ತೀರ್ಪಲ್ಲ' ಎಂದು ರಂ.ಶ್ರೀ.ಮುಗಳಿರವರು ಹೇಳಿರುವುದನ್ನು ಗಮನಿಸಬಹುದಾಗಿದೆ.[4] ಸಾಹಿತ್ಯದ ಅಥವ ಒಂದು ಕೃತಿಯ ಮಹತ್ವ ಎಷ್ಟು, ಏಕೆ, ಮತ್ತು ಹೇಗೆ ಆ ಮಹತ್ವ ಲಭಿಸಿದೆ? ಇವು ವಿಮರ್ಶೆಯ ಮೂಲಭೂತ ಆಸಕ್ತಿಗಳಾಗಿವೆ.

ವಿಮರ್ಶೆ ಎಂದರೆ ಜಿ.ವೆಂಕಟಸುಬ್ಬಯ್ಯನವರು 'ತಮ್ಮ ಯಾವುದಾದರೂ ಒಂದು ಕೃತಿಯ ಯೋಗ್ಯತೆಯನ್ನು ಪರಾಮರ್ಶಿಸುವ ಕಾರ್ಯ' ಎಂದಿದ್ದಾರೆ. [5] ವಿಮರ್ಶಕ ಎಂದರೆ? 'ಸಾಹಿತ್ಯ, ಕಲೆ ಮುಂತಾದವುಗಳ ಗುಣ–ದೋಷಗಳನ್ನು ಪರಿಶೀಲಿಸುವವನು' ಎಂದು ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿತ 'ರತ್ನಕೋಶ' ಸಂಕ್ಷಿಪ್ತ ಕನ್ನಡ ನಿಘಂಟು ತಿಳಿಸುತ್ತದೆ. [6] 'ವಿಮರ್ಶೆ ಒಂದು ಅನುಭವಕ್ಕೂ ಮತ್ತೊಂದು ಅನುಭವಕ್ಕೂ ಇರುವ ವ್ಯತ್ಯಾಸಗಳನ್ನು ಗುರುತಿಸಿ ಬೆಲೆ ಕಟ್ಟುವ ಪ್ರಯತ್ನವಾಗಿದೆ' [7] ಸ್ಥೂಲವಾಗಿ ವಿವೇಚಿಸುವುದಾದರೆ ವಿಮರ್ಶಕ ಎಂದರೆ ಯಾರು? ವಿಮರ್ಶಕನಿಗೆ ಇರಬೇಕಾದ ಅರ್ಹತೆ ಯಾವವು? ವಿಮರ್ಶಕನು ಒಳಗೊಳ್ಳಲೇಬೇಕಾದ ಅಂಶಗಳಾವವು? ಒಬ್ಬ ಉತ್ತಮ ವಿಮರ್ಶಕನನ್ನು ಗುರುತಿಸುವುದು ಹೇಗೆ? ಹೀಗೆ ಹುಟ್ಟುವ ಹತ್ತು ಹಲವು ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡು ಕೊಳ್ಳಬೇಕಾಗುತ್ತದೆ.

ಸಾಮಾನ್ಯವಾಗಿ ವಿಮರ್ಶಕ ಎಂದೊಡನೆ ಮೂಗು ಮುರಿಯುವವರೇ ಹೆಚ್ಚು. 'ಏನನ್ನೂ ಬರೆಯಲಾಗದವನು ವಿಮರ್ಶಕನಾಗುತ್ತಾನೆ' ಎಂದು ಸಾರಾಸಗಟಾಗಿ ಆರೋಪಿಸಲಾಗುತ್ತದೆ. ತತ್ಫಲದಂತೆ ತಾವೇನೂ ಕಮ್ಮಿಯಿಲ್ಲ ಎಂದು ಹಠಕ್ಕೆ ಬಿದ್ದು ಸಾಹಿತ್ಯಿಕ ಕೃಷಿಗೈದ ವಿಮರ್ಶಕ ಮಹನೀಯರುಗಳನ್ನೂ ಕಾಣುತ್ತೇವೆ. 'ವಿಮರ್ಶಕನನ್ನು ಕವಿ ವಿರೋಧಿ ಎಂದೇ ಬಿಂಬಿಸುತ್ತ ಬಂದಿರುವುದನ್ನು' ಸಾಹಿತ್ಯ ಚರಿತ್ರೆಯುದ್ದಕ್ಕೂ ಕಾಣುತ್ತೇವೆ. 'ಪ್ರೌಢ ವ್ಯಾಸಾಂಗ, ಆಳವಾದ ಅನನ್ಯ ಚಿಂತನೆ, ವಿಮರ್ಶೆಯ ಬಗ್ಗೆ ಕಳಕಳಿ ಇವು ಉತ್ತಮ ವಿಮರ್ಶಕನ ಲಕ್ಷಣಗಳಾಗಿವೆ. ಯು.ಆರ್. ಅನಂತಮೂರ್ತಿಯವರು ಗೋಪಾಲ ಕೃಷ್ಣ ಅಡಿಗರ 'ಭೂಮಿಗೀತ' ಕವನ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ 'ಕವನಗಳ ಕಡೆ ಬೆರಳು ಮಾಡಿ ತೋರಿಸಿ ಸಮರ್ಥಿಸಿಕೊಳ್ಳಲಾಗದ ಮಾತುಗಳನ್ನು ತನ್ನ ಜವಾಬ್ದಾರಿಯನ್ನರಿತ ವಿಮರ್ಶಕ ಆಡಕೂಡದು. ಅವನ

[3] ಉಲ್ಲೇಖ : ನಿಂಗಣ್ಣ.ಜಿ.ಸಿ. (2012). ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ. ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ, ಪು.ಸಂ: 387. (3ನೆ ಪರಿಷ್ಕೃತ ಮುದ್ರಣ).

[4] ಉಲ್ಲೇಖ : ನಾಗಭೂಷಣ ಸ್ವಾಮಿ ಓ. ಎಲ್ .(1983). ವಿಮರ್ಶೆಯ ಪರಿಭಾಷೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

[5] ವೆಂಕಟಸುಬ್ಬಯ್ಯ. (2013). ಇಗೋ ಕನ್ನಡ ಸಾಮಾಜಿಕ ನಿಘಂಟು, ಸಂಯುಕ್ತ ಸಂಪುಟ. ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪು.ಸಂ: 611.

[6] ಸಂಕ್ಷಿಪ್ತ ಕನ್ನಡ ನಿಘಂಟು. (1975). ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು. ಪು.ಸಂ: 1163

[7] ಉಲ್ಲೇಖ : ಶಿವರುದ್ರಪ್ಪ ಜಿ. ಎಸ್. (1961). ವಿಮರ್ಶೆಯ ಪೂರ್ವ ಪಶ್ಚಿಮ. ಸಾರಸ ವಿಹಾರ ಪ್ರಕಾಶನ, ಸರಸ್ವತಿಪುರಂ ಮೈಸೂರು ಪು.ಸಂ : 04.

ಜಾಣತನದ ಪ್ರದರ್ಶನಕ್ಕೆ ಕವಿ ನೆವವಾಗಕೂಡದು' ಎಂಬ ಮಾತುಗಳು ವಿಮರ್ಶಕನ ಜವಾಬ್ದಾರಿಯನ್ನು ಕುರಿತಾದದ್ದವು'[8]. ನಿಜಕ್ಕೂ ವಿಮರ್ಶಕನ ಕಾರ್ಯ ಕತ್ತಿಯ ಅಲಗಿನ ಮೇಲೆ ನಡೆದಾಡುವ ಅನುಭವವಾಗಿದೆ.

ವಿಮರ್ಶೆಯಲ್ಲಿ ಕವಿ ಮತ್ತು ವಿಮರ್ಶಕ ಪೂರ್ವ ಗ್ರಹಗಳಿಂದ ಮುಕ್ತನಾಗಿರಬೇಕು. 'ವಿಮರ್ಶೆ ಮೂಲತಃ ಬುದ್ಧಿ ಪ್ರಧಾನವಾದದ್ದಾದರೂ, ಅದು ಒಂದು ಕಲೆಯೂ ಹೌದು, ಕೃತಿಯ ವಿಚಾರದಲ್ಲಿ ನಾವು ಮಾಡುವ ಪ್ರಾಮಾಣಿಕವಾದ ವಿಮರ್ಶೆಯಾಗಲಿ, ಪ್ರಶಂಸೆಯಾಗಲಿ ಕಾವ್ಯವನ್ನು ಕುರಿತಾದದ್ದೇ ಹೊರತು, ಕವಿಯನ್ನು ಕುರಿತಾದದ್ದು ಅಲ್ಲ' ಎಂದು ಟಿ.ಎಸ್.ಎಲಿಯಟ್[9] ಹೇಳಿರುವ ಮಾತು ಈ ಮೇಲಿನ ಅಂಶಕ್ಕೆ ಪುಷ್ಠಿಯನ್ನು ನೀಡುತ್ತದೆ. ವಿಮರ್ಶಕ ಸ್ವೀಕೃತಭಾವವುಳ್ಳನಾಗಿರಬೇಕು. ಇರ್ವರ ವ್ಯಕ್ತಿತ್ವ ಗೌಣವಾಗಿರಬೇಕು. ವ್ಯಕ್ತಿನಿಷ್ಠವಲ್ಲದೆ; ವಸ್ತುನಿಷ್ಠವಾಗಿರಬೇಕು. ಮುಖಸ್ತುತಿಗೆ ಅವಕಾಶವಿಯ್ಯಬಾರದು. ರಾಗ–ದ್ವೇಷ, ಅಸೂಯೆ ಸಲ್ಲದು. ಒಬ್ಬ ಉತ್ತಮ ವಿಮರ್ಶಕನೊಳಗೆ ಕವಿ, ಸಹೃದಯಿ ನೆಲೆಗೊಂಡಿರಬೇಕು. ಇದನ್ನೇ ಕೆ.ವಿ.ಪುಟ್ಟಪ್ಪವನವರು 'ಕವಿಗಳಿಗಿರುವಂತೆ ವಿಮರ್ಶಕನಿಗೂ ಸಮಗ್ರವಾದ 'ದರ್ಶನ'ವಿರಬೇಕೆಂದು ಹೇಳಿದ್ದಾರೆ. ದರ್ಶನ : ಪೂರ್ಣ ದೃಷ್ಟಿ, ಕಾಲವನ್ನು ಸಮಗ್ರವಾಗಿ ಒಳಗೊಳ್ಳುವ ಪ್ರಜ್ಞೆ ಮತ್ತು ಪ್ರತಿಮಾ ಕವಿ ದರ್ಶನದ ಮಾಧ್ಯಮಗಳಾಗಿವೆ. ಇವು ಕೆ.ವಿ.ಪುಟ್ಟಪ್ಪವನವರ ಕಾವ್ಯ ಮೀಮಾಂಸೆಯ ಮೂರು ಮುಖ್ಯ ಪರಿಕಲ್ಪನೆಗಳಾಗಿವೆ.[10]

ಒಟ್ಟಂದದಲ್ಲಿ ವಿಮರ್ಶಕನ ಕಾರ್ಯ; ಕವಿ ಕೃತಿಯನ್ನು ಹೊಗಳುವುದೂ ಅಲ್ಲ, ತೆಗಳುವುದೂ ಅಲ್ಲ ; ಸದ್ಗೃಹಿಣಿಯೊಬ್ಬಳು ಅನ್ನ ಮಾಡಬೇಕಾದರೆ ಮೊದಲ ಹಂತದಲ್ಲಿ ಮೊರದಲ್ಲಿ ಅಕ್ಕಿ ಹಾಕಿಕೊಂಡು ಧೂಳು ಕೇರಿ, ಅದರಲ್ಲಿನ ಸಣ್ಣ–ಸಣ್ಣ ಕಲ್ಲು, ನೆಲ್ಲು, ಹುಳುಗಳನ್ನು ಹುಡುಕಿ ತೆಗೆದು, ಎರಡನೆಯ ಹಂತದಲ್ಲಿ ಅಕ್ಕಿಯನ್ನು ಪಾತ್ರೆಯ ನೀರಿನಲ್ಲಿ ಹಾಕಿ ಜಾಲಿಸಿ, ತೊಳೆದು ಸ್ವಚ್ಚಗೊಳಿಸಿ ಅನ್ನ ಮಾಡುತ್ತಾಳೆ ವಿನಃ ಅಕ್ಕಿಯನ್ನು ಆರಿಸಿ ಬಿಸುಡುವುದಿಲ್ಲ. ಈ ಕಾರ್ಯದಲ್ಲಿ ಭೇದವನ್ನೆಣಿಸಲು ಸಾಧ್ಯವೇ..? ಅಷ್ಟಾಗಿಯೂ ಊಟಮಾಡುವಾಗ ಅನ್ನದೊಳಗೆ ಅವಳ ಕಣ್ತಪ್ಪಿನಿಂದಾಗಿ ಕಲ್ಲುಗಳು ನುಸುಳಿಕೊಂಡುಳಿದರೆ ಅದು ಊಟದ ಸವಿಯನ್ನೇ ಹಾಳುಮಾಡಿ, ದಾಂಪತ್ಯದಲ್ಲಿ ವಿರಸವನ್ನುಂಟುಮಾಡುತ್ತದೆ. 'ಭತ್ತವನ್ನೇನೂ ಆಗಸದಲ್ಲಿ ಬೆಳೆಯುವುದಿಲ್ಲ; ನೆಲದಮೇಲೇನೇ ಬೆಳೆಯುವುದೆಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೂ ಊಟದ ಮಧ್ಯೆ ಒಂದರಳು ಕಡಿದರೂ ಸಹಿಸಲಸಾಧ್ಯವಾದ ನೋವು, ಇರುಸು–ಮುರುಸುನ್ನುಂಟುಮಾಡುತ್ತದೆ. 'ಜೀವ ಅಳ್ ಕಡಿದಂಗಾಯ್ತು' ಅಂತ ಜನಪದರು ಕಟ್ಟಿರುವ ನುಡಿಗಟ್ಟು ಅನುಭವವೇಧ್ಯ ಸಂಗತಿಯಾಗಿದೆ. ಅಂತೆಯೇ ವಿಮರ್ಶಕ ಕೃತಿಯಲ್ಲಿನ ಲೋಪ–ದೋಷಗಳನ್ನು ಹುಡುಕಿ ತೆಗೆಯುತ್ತಾನೆ. ಕವಿಯಾದವನು ಮನಸಾ ಸ್ವೀಕರಿಸಿ, ತಿದ್ದೀ–ತೀಡಿ, ಒಪ್ಪವಾಗಿಸಿ ಉಣಬಡಿಸಬೇಕು. ಸಹೃದಯಿ ಓದುಗನಿಗೆ ಓದಿನಲ್ಲಿ ಒದಗಬಹುದಾದ ಸಾಕಷ್ಟು ರಸಭಂಗಗಳನ್ನು ನಿವಾರಣೆ ಮಾಡಿದಂತಾಗುತ್ತದೆ. ವಿಮರ್ಶೆಯ ಅಂತಿಮ ಫಲಿತಾಂಶ ಉತ್ತಮೊತ್ತಮವಾಗಿರುತ್ತದೆ.

[8] ಎಸ್.ಆಮೂರ (2012). ಪೂರ್ವೋಕ್ತ. 285
[9] ಅದೇ., ಪುಟ 285
[10] ಅದೇ ಪುಟ ಸಂಖ್ಯೆ 285

ನಾಡಿನ ಖ್ಯಾತ ವಿಮರ್ಶಕರಾದ ಗಿರಡ್ಡಿ ಗೋವಿಂದರಾಜರವರ 'ವಿಮರ್ಶಕನಾದವನು ಪಾಕಪ್ರವೀಣನಲ್ಲದಿರಬಹುದು ; ಆದರೆ ಮಾಡಿದಡುಗೆಯ ರುಚಿ ಹೇಗಿದೆ? ಎಂದು ಹೇಳಬಲ್ಲ ಉತ್ತಮ ರಸಗ್ರಾಹಿ, ಗುಣಗ್ರಾಹಿಯಾಗಿರುತ್ತಾನೆ' ಎನ್ನುವ ಮಾತು ವಿಮರ್ಶಕನ ಮಹತ್ವ ಮತ್ತು ಅಗತ್ಯತೆಯನ್ನು ಸಾರಿ ಹೇಳುತ್ತದೆ.[11] ಹಾಗಾದರೆ ವಿಮರ್ಶಕ ಯಾರು? ಓದುಗ ಯಾರು? ಎನ್ನುವ ಪ್ರಶ್ನೆಗೆ ಉತ್ತರ : ಕವಿಯೇ ತನ್ನ ಕೃತಿಯ ಮೊದಲ ಓದುಗ ಮತ್ತು ವಿಮರ್ಶಕನಾಗಿರುತ್ತಾನೆ, ಆಗಿರಬೇಕು ಕೂಡ. ಅದೇ ಸದ್ಗೃಹಿಣಿ ಅನ್ನಕ್ಕೆ, ಸಾರಿಗೆ ಉಪ್ಪು ಸರಿಯಾಗಿದೆಯೇ..? ಇಲ್ಲವೆ..? ಎಂದು ಮೊದಲು ತಾನೇ ಪರೀಕ್ಷಿಸಿ, ರುಚಿ ನೋಡಿ ಅಡುಗೆ ಸಿದ್ಧಗೊಳಿಸಿ ಮನೆಮಂದಿಗೆಲ್ಲ ಉಣಬಡಿಸಿ ನಂತರ ತಾನುಂಡು ಸುಖಿಸುತ್ತಾಳೆ ಹೊರತು ಪಕ್ಕದ ಮನೆಯಾಕೆಯ ನೆರವು ಅವಳಿಗೆ ಬೇಕಾಗದು. ಇದನ್ನು ವಿಶಾಲ ಅರ್ಥದಲ್ಲಿ ಗ್ರಹಿಸುವುದಾದರೆ ಮದುವೆ–ಮುಂಜಿಗೆಂದು ದೊಡ್ಡಡುಗೆ ಮಾಡಿ ಉಣಬಡಿಸುವಾಗ ತಾ ರುಚಿ ನೋಡಿ ಸಮಂಜಸ ಅನ್ನಿಸಿದರೂ ಕೂಡ ಮತ್ತೊಬ್ಬರನ್ನು ಕರೆದು ರುಚಿ ನೋಡಿ ಹೇಳಿ ಎಂದು ಕೇಳುತ್ತೇವೆ. ಬಂದವರ ಮುಂದೆ ನಗೆಪಾಟಲಿಗೆ ಈಡಾಗಬಾರದೆಂದು ಜಾಗೃತಿ ವಹಿಸುತ್ತೇವೆ. ಅಂತೆಯೇ ಕವಿಯಾದವನು ತನ್ನ ಕೃತಿಯನ್ನು ಲೋಕಾರ್ಪಣೆ ಮಾಡುವ ಮುನ್ನ ಕೃತಿಯಲ್ಲಿ ಉಳಿದಿರಬಹುದಾದ ಲೋಪ–ದೋಷಗಳನ್ನು ಗಮನಿಸುವಂತದ್ದು ಬಹುಮುಖ್ಯ ಸಂಗತಿ. ಆದಾಗ್ಯೂ ಎಲ್ಲರೂ ಚಿನ್ನವೆಂದು ಒಪ್ಪುವದನ್ನೂ ಕೂಡ ಉಜ್ಜಿ, ತಿಕ್ಕಿ ಪರೀಕ್ಷಿಸಿ ನೋಡಿ ನಿರ್ಣಯಿಸುವ ಅಕ್ಕಸಾಲಿಗನಂತೆ, ಇದ್ದದ್ದನ್ನು ಇದ್ದಂತೆ ತೋರುವ ಕನ್ನಡಿಯಂತೆ, ರೋಗಪೀಡಿತ ರೋಗಿಗೆ ವೈದ್ಯ ಚುಚ್ಚುಮದ್ದು ಹಾಕಿ, ಕಹಿಮಾತ್ರೆಗಳನ್ನು ನೀಡಿ, ತೆಗೆದುಕೊಳ್ಳುವ ವಿಧಾನವನ್ನು ತಿಳಿಸುತ್ತಾನೆ. ಅದನ್ನನುಸರಿಸುವ ರೋಗಿಯ ಮೇಲೆ ತನ್ನ ಪರಿಣಾಮ ಬೀರಿ, ರೋಗ ವಾಸಿಯಾಗಿ ರೋಗಿ ಗುಣಮುಖನಾಗುತ್ತಾನೆ. ಈ ರೀತಿಯಲ್ಲಿನ ಚಿಕಿತ್ಸಿಕಾ ಗುಣ–ಸ್ವಭಾವ ವಿಮರ್ಶಕನದ್ದಾಗಿರುತ್ತದೆ.

ಕವಿ ಲಕ್ಷ್ಮೀಶನು ತನ್ನ ಕೃತಿಯ ಕುರಿತು 'ದೇವಪುರದ ಲಕ್ಷ್ಮೀಕಾಂತನು ಸಂಗೀತ ಕಲಾಜಾಣನು ವೀಣೆಯಿಂದ ಗಾನವನ್ನು ನುಡಿಸುವಂತೆ ನನ್ನ ವಾಣಿಯಿಂದ ಕವಿತೆಯನ್ನು ನುಡಿಸಿದನೆನ್ನುವಂತೆ (ಸಜ್ಜನರೆಲ್ಲರಿಗೂ) ದ್ವೇಷವನ್ನು ಬಿಟ್ಟು, ನಿಂದಕರನ್ನು ನಿಂದಿಸಿ ಲಕ್ಷ್ಯಪೂರ್ವಕವಾಗಿ ಕೇಳಬೇಕು (ಅವನಲ್ಲಿ) ದೋಷವಿದ್ದರೂ ಚಂದ್ರನ ಹಾಗೆ ನನ್ನ ಕಾವ್ಯದ ರಸವು ಸಜ್ಜನರಿಗೆ ಪ್ರಿಯವಾಗದೆ ಇರಲಾರದು. ಇದರ ಮೇಲೂ ಯಾವನಾದರೂ ನೀಚನು ನನ್ನ ಕಾವ್ಯಕ್ಕೆ ದೋಷವನ್ನು ಕಲ್ಪಿಸಿದರೆ ಅವನು ಈ ಭೂಮಂಡಲದಲ್ಲಿ (ಚಂದ್ರನನ್ನು ದ್ವೇಷಿಸುವ) ಕಳ್ಳನಿಗೂ, ವಿರಹಿಗೂ ಸರಿಯಾಗಿರುವುದರಲ್ಲಿ ಏನೂ ಸಂಶಯವಿಲ್ಲ. ಮುಖವು ಹೇಗೆ ಇರುವುದೋ ಅದೇ ರೀತಿಯಾಗಿ ರತ್ನಗನ್ನಡಿಯು ತೋರಿಸುವುದಲ್ಲದೇ ಬೇರೆ ರೀತಿ ತೋರಿಸುವುದೇ..? ಅದರಂತೆಯೇ ಭೂಮಿಯಲ್ಲಿ ಶೋಭಿಸುವ ಶ್ರೇಷ್ಠವಾದ ಕನ್ನಡ ಭಾಷೆಯನ್ನು ಬಲ್ಲ ವಿದ್ವಾಂಸರು ಯಾವ ರೀತಿಯಿಂದ ಕಾವ್ಯವನ್ನು ಹೇಳಿದರೋ ಅದೇ ನನಗೆ ಉದಾಹರಣೆಯಲ್ಲದೆ ಬೇರೆ ರೀತಿಯಿಂದ ಹೇಳುವುದು ಯೋಗ್ಯವಾಗಲಾರದು'.[12] ಈ ರೀತಿಯಾದ ಕವಿಯ ಮನೋಧೋರಣೆಯನ್ನು ಕಾಣುತ್ತೇವೆ.

---

[11] ಗಿರಡ್ಡಿ ಗೋವಿಂದರಾಜ್ (2016). ರವರು ಧಾರವಾಡದಲ್ಲಿ ಸೋಮುರೆಡ್ಡಿ ರವರ 'ನೋಟದಾಗೆ ನಗೆಯ ಮೀಟಿ' ಕಥಾಸಂಕಲನವನ್ನು ಬಿಡುಗಡೆಮಾಡಿ ಮಾಡಿದ ಭಾಷಣ ತುಣುಕು.

[12] ಪೂಜಾರ್ ಜಿ. ಎಸ್. (1995). ಜೈಮಿನಿ ಭಾರತ, ಕಥಾಸಂಗ್ರಹ, ಕವಿ ಲಕ್ಷ್ಮೀಶ. ಪಿ.ಸಿ.ಶಾಬಾದಿಮಠ ಬುಕ್ ಡಿಪೋ, ಗದಗ, ಪು.ಸಂ : 3

ಕವಿಯೊಳಗೊಬ್ಬ ಓದುಗ–ವಿಮರ್ಶಕನಿರುವಂತೆ; ವಿಮರ್ಶಕನೊಳಗೊಬ್ಬ ಕವಿ–ಓದುಗ ನೆಲೆಗೊಂಡಿರುತ್ತಾನೆ. ಕವಿ ಮತ್ತು ವಿಮರ್ಶಕನದು ಒಂದೇ ಉದ್ದೇಶವಾಗಿರುತ್ತದೆ. ಹೇಳುವ ವಸ್ತು–ವಿಷಯವನ್ನು ಇನ್ನಷ್ಟು ಕರಾರುವಕ್ಕಾಗಿ, ನಿಖರವಾಗಿ ಅದು ಒಳಗೊಳ್ಳುವ ಅರ್ಥಸಾಧ್ಯತೆಗಳನ್ನು ಪ್ರಸ್ತುತ ಸಂದರ್ಭಕ್ಕೆ ಮುಖಾಮುಖಿಗೊಳಿಸುವುದಾಗಿದೆ.

ವಿಫಲ ವಿಮರ್ಶೆ: ವಿಮರ್ಶೆ ಎಂದರೆ? ಯಾರೊಬ್ಬರ ಮುಖ–ಮುಲಾಜಿಗೆ ಸಿಲುಕದೆ, ಇದ್ದದ್ದನ್ನು ಇದ್ದಂತೆ ಹೇಳುವ 'ಖಂಡಿತವಾದಿ ಲೋಕವಿರೋಧಿ' ಎಂಬಂತೆ ವಿತಂಡವಾದಕ್ಕೂ ಇಳಿಯದೆ ಚಿತ್ತ ಸಮತೆಯನ್ನು ಕಾಯ್ದುಕೊಳ್ಳುವುದು ಇಲ್ಲಿ ಮುಖ್ಯ ಸಂಗತಿಯಾಗಿದೆ. ಗೋಪಾಲ ಕೃಷ್ಣ ಅಡಿಗರು[13] ಹೊಸ ವಿಮರ್ಶೆಯ ಸ್ವರೂಪವನ್ನು 'ವಿಮರ್ಶನದ ಮೊದಲನೆಯ ಕೆಲಸ ಕೃತಿಯ ಆಮೂಲಾಗ್ರವಾದ ಅಭ್ಯಾಸ; ಈ ಅಭ್ಯಾಸಕ್ಕೆ ತಕ್ಕ ಊಹಾಶಕ್ತಿ, ಭಾಷಾಜ್ಞಾನ, ವಿನಯ ಮತ್ತು ತಾಳ್ಮೆ ಅತ್ಯಗತ್ಯ, 'ಈವರೆಗಿನ ನಮ್ಮ ವಿಮರ್ಶೆ ಸ್ನೇಹಿತರ ಬಗ್ಗೆ ದಾಕ್ಷಿಣ್ಯ, ದೊಡ್ಡವರ ಬಗ್ಗೆ ಭಯ, ಮೂರವನೆಯವರ ಬಗ್ಗೆ ಔದಾಸೀನ್ಯ ಅಥವ ನಿಷ್ಕಾರಣ ವಿರೋಧ ಇವುಗಳಿಂದ ಸಾಮಾನ್ಯವಾಗಿ ಮಲಿನವಾಗಿದೆ ಎಂದರೆ..? ವಿಮರ್ಶಕನ ಕಾರ್ಯ ವ್ಯಕ್ತಿನಿಷ್ಠವಾಗಿತ್ತೇ ಹೊರತು ಕೃತಿನಿಷ್ಠವಾಗಿರಲಿಲ್ಲ, ವಸ್ತುನಿಷ್ಠ ಯೋಚನೆ ವ್ಯವಹಾರಗಳಿಲ್ಲದೆ, ಕೃತಿನಿಷ್ಠ ವಾಚನ ವಿಮರ್ಶನಗಳಿಲ್ಲದೆ ಬುದ್ಧಿ ಜೀವನ ವಿಕಾಸವಾಗುವುದಿಲ್ಲ. ಹೃದಯ ಶುದ್ಧವಾಗುವುದಿಲ್ಲ; ಬದಲಾಗಿ, ಬುದ್ಧಿ ದಾರಿದ್ರ್ಯ, ಹೃದಯದ ಕಾರ್ಪಣ್ಯ ಇವು ಹಬ್ಬುತ್ತವೆ.[14]

**ಉಪಸಂಹಾರ**

'ಕದಿಯದ ವರ್ತಕ, ಕವಿ ಇಲ್ಲವೆನ್ನುವ ನಯಸೇನನ ಮಾತಿನಂತೆ, ಒಬ್ಬ ಕವಿ, ಸಾಹಿತಿ, ಲೇಖಕರಾಗುವವರು ಅನ್ಯಮೂಲಗಳಿಂದ ಸಂಗ್ರಹಿಸಿದ ಮಾಹಿತಿ, ವಸ್ತು–ವಿಷಯ, ಸಂಗತಿಗಳನ್ನು, ವ್ಯಾಖ್ಯಾನಗಳನ್ನು ಭಾವಾನುಭಾವಗಳ ಅಭಾವದಿಂದಾಗಿ ಬೇರೊಬ್ಬರ ಕವಿಭಾವನೆಗಳನ್ನು ಮನಸೋ ಇಚ್ಛೆ, ತಮ್ಮದೆಂಬಂತೆಯೇ ಬಳಸುವ ಪದ್ಧತಿಯನ್ನು ಕಾಣುತ್ತೇವೆ. ಆಧಾರ ಗ್ರಂಥಗಳು, ಪರಾಮರ್ಶನ ಗ್ರಂಥಗಳು, ಗ್ರಂಥ ಋಣ, ಕೃಪೆ ಇತ್ಯಾದಿಯಾಗಿ ಉಲ್ಲೇಖಿಸುವುದರೊಂದಿಗೆ ಉಪಕಾರ ಸ್ಮರಣೆಯನ್ನು ಮಾಡಿಕೊಳ್ಳುವ ಕನಿಷ್ಠತಮ ಸೌಜನ್ಯದ ಮನೋಭಾವನೆಯನ್ನು ನಾವಿಂದು ಬೆಳಸಿಕೊಳ್ಳಬೇಕಾಗಿದೆ.

[13] ಅದೇ ಪುಟ ಸಂ.4
[14] ಉಲ್ಲೇಖ : ಗೋಪಾಲ ಕೃಷ್ಣ ಅಡಿಗರು 'ಸಾಕ್ಷಿ' ನಿಯತಕಾಲಿಕದ ಮೊದಲನೆಯ ಸಂಚಿಕೆಯ ಮುನ್ನುಡಿಯಲ್ಲಿ ಬರೆದಿರುವಂತೆ.

**ಪರಾಮರ್ಶನ ಗ್ರಂಥಗಳು**


- ಆಮೂರ. ಎಸ್. (2012) ಕನ್ನಡ ಸಾಹಿತ್ಯ ಮೀಮಾಂಸೆ. ಸಂ: ರಹಮತ್ ತರೀಕೆರಿ, ಪ್ರಸರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.
- ನಾಗಭೂಷಣ ಸ್ವಾಮಿ ಓ. ಎಲ್. (1983). ವಿಮರ್ಶೆಯ ಪರಿಭಾಷೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
- ನಿಂಗಣ್ಣ.ಚೆ.ಸಿ. (2012). ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ. ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ. (3ನೆ ಪರಿಷ್ಕೃತ ಮುದ್ರಣ).
- ಪೂಜಾರ್ ಜಿ. ಎಸ್. (1995). ಜೈಮಿನಿ ಭಾರತ, ಕಥಾಸಂಗ್ರಹ, ಕವಿ ಲಕ್ಷ್ಮೀಶ. ಪಿ.ಸಿ.ಶಾಬಾದಿಮಠ ಬುಕ್ ಡಿಪೋ, ಗದಗ.
- ಸಂಕ್ಷಿಪ್ತ ಕನ್ನಡ ನಿಘಂಟು. (1975). ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು. ಪು.ಸಂ: 1163
- ಶಾಮರಾಯ ತ.ಸು. (2010). ಕನ್ನಡ ಸಾಹಿತ್ಯ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
- ಶಿವರುದ್ರಪ್ಪ ಜಿ. ಎಸ್. (1961). ವಿಮರ್ಶೆಯ ಪೂರ್ವ ಪಶ್ಚಿಮ. ಸಾರಸ ವಿಹಾರ ಪ್ರಕಾಶನ, ಸರಸ್ವತಿಪುರಂ ಮೈಸೂರು.
- ವೆಂಕಟಸುಬ್ಬಯ್ಯ. (2013). ಇಗೋ ಕನ್ನಡ ಸಾಮಾಜಿಕ ನಿಘಂಟು, ಸಂಯುಕ್ತ ಸಂಪುಟ. ನವಕರ್ನಾಟಕ ಪ್ರಕಾಶನ, ಬೆಂಗಳೂರು.


IIMRD JOURNALS